ಹರಿಶ್ಚಂದ್ರ ಘಾಟ್‌ನಲ್ಲಿರುವ ವಿದ್ಯುತ್ ಚಿತಾಗಾರ ಕುರಿತು

347 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಿಶ್ಚಂದ್ರ ಘಾಟ್ನಲ್ಲಿರುವ ವಿದ್ಯುತ್ ಚಿತಾಗಾರವನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಶವವನ್ನು ಭಸ್ಮ ಮಾಡುವ ಆ ಯಂತ್ರದ ಆಯಸ್ಸು ಎಷ್ಟು?

ಇ) ಅಲ್ಲಿನ ಚಿತಾಗಾರದಿಂದ ಹೊರಬರುತ್ತಿರುವ ದುರ್ವಾಸನೆಯಿಂದ ಅಲ್ಲಿನ ಸುತ್ತಮುತ್ತಲ ನಿವಾಸಿಗಳ ಆರೋಗ್ಯದ ಬಗ್ಗೆ ದುಷ್ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅದನ್ನು ತಡೆಗಟ್ಟಲು ಆಧುನಿಕ ಯಂತ್ರವನ್ನು ಅಳವಡಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಉ) ಹಾಗಿದ್ದಲ್ಲಿ ಎಷ್ಟು ದಿವಸಗಳಲ್ಲಿ ಅದನ್ನು ಕಾರ್ಯಗತ ಮಾಡಲಾಗುವುದು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಜನವರಿ 1981ರಲ್ಲಿ

ಆ) 10000 ಶವಗಳನ್ನು ಸುಡುವವರೆವಿಗೂ.

ಇ) ಹೌದು

ಈ) ಹೌದು

ಉ) ತಜ್ಞರ ಅಭಿಪ್ರಾಯ ಪಡೆದ ನಂತರ.

ಅಪಘಾತಗಳ ಪರಿಹಾರ ಶಾಶ್ವತ ನಿಧಿ

527 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿಗೆ ಬೆಂಗಳೂರು ಮತ್ತು ಸಿಂಧನೂರುಗಳಲ್ಲಿ ನಡೆದಂತಹ ಬೆಂಕಿ ಅಪಘಾತಗಳ ಪ್ರಕರಣಗಳಲ್ಲಿ ಮರಣ ಹೊಂದಿದವರ ಕುಟುಂಬಗಳಿಗೆ, ನೊಂದವರಿಗೆ ಮತ್ತು ಆಸ್ತಿಪಾಸ್ತಿಗಳನ್ನು ಕಳೆದುಕೊಂಡವರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಟ್ಟಿರುವ ಹಣ ಎಷ್ಟು?

ಆ) ಪ್ರಧಾನಮಂತ್ರಿಗಳ ಪರಿಹಾರ ನಿಧಿಯಿಂದ ಅದಕ್ಕೆ ಪರಿಹಾರವೇನಾದರೂ ಬಂದಿದೆಯೇ?

ಇ) ಅಂತಹ ಅಪಘಾತಗಳ ಪರಿಹಾರಕ್ಕಾಗಿ ಶಾಶ್ವತ ನಿಧಿಯ ವ್ಯವಸ್ಥೆಯನ್ನು ಮಾಡಲು ಸಾಧ್ಯವೇ?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು) :

ಅ) ದಿನಾಂಕ 4.3.1994ರಂದು ಬೆಂಗಳೂರು ನಗರ ಮತ್ತು ಸಿಂಧನೂರುಗಳಲ್ಲಿ ಸಂಭವಿಸಿದ ಬೆಂಕಿ ದುರಂತಕ್ಕೆ ಸಂಬಂಧಿಸಿದಂತೆ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಯಾವುದೇ ಹಣವನ್ನು ನೀಡಿರುವುದಿಲ್ಲ; ಆದಾಗ್ಯೂ ನೊಂದ ಸಂತ್ರಸ್ಥರ ಸಂಕಷ್ಟ ನಿವಾರಿಸಲು ಕೆಳಕಂಡ ಪರಿಹಾರ ಹಾಗೂ ಪುನರ್ ವಸತಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ

(ರೂ. ಲಕ್ಷಗಳಲ್ಲಿ)

ಸ್ಥಳ	ಮೃತಪಟ್ಟವರ ಕುಟುಂಬಗಳಿಗೆ ನೀಡಿದ ಅನುಕಂಪ ಭತ್ಯ	ಪರಿಹಾರ ಕೇಂದ್ರಗಳನ್ನು ನಡೆಸಲು ತಗುಲಿದ ವೆಚ್ಚ	ಗುಡಿಸಲು ನಗದು ರೂಪ	ನಾಶಕ್ಕೆ ನೀಡಿದ ಪರಿಹಾರ ಕಟ್ಟಡ ಸಾಮಗ್ರಿಗಳ ರೂಪದಲ್ಲಿ	ಒಟ್ಟು	ಒಟ್ಟು ಪರಿಹಾರ
ಬೆಂಗಳೂರು ನಗರ	4.00	0.44.	10.15	-	10.15	14.59
ಸಿಂಧನೂರು	-	*	2.59	11.60	14.19	14.19

* ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ಪರಿಹಾರ ಕೇಂದ್ರಗಳನ್ನು ನಿರ್ವಹಿಸಲಾಗಿದೆ.

ಆ) ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಯಾವುದೇ ಪರಿಹಾರ ಬಂದಿರುವುದಿಲ್ಲ.

ಇ) ಕೇಂದ್ರದ ಒಂಭತ್ತನೇ ಹಣಕಾಸು ಆಯೋಗದ ಶಿಫಾರಸಿನನ್ವಯ ಸ್ಥಾಪಿಸಲ್ಪಟ್ಟಿರುವ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ, ಆಕಸ್ಮಿಕ ಬೆಂಕಿ, ನೆರೆಹಾವಳಿ, ಬರ ಇತ್ಯಾದಿ ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಪರಿಹಾರ ಮತ್ತು ಪುನರ್ವಸತಿ, ಕಾರ್ಯಗಳನ್ನು ಕೈಗೊಳ್ಳಬಹುದಾಗಿದೆ. ಆದ್ದರಿಂದ, ಇನ್ನಾವುದೇ ಶಾಶ್ವತ ನಿಧಿಯ ವ್ಯವಸ್ಥೆ ಮಾಡುವ ಅಗತ್ಯವಿಲ್ಲ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : 24 ಲಿಖಿತ ಮೂಲಕ ಉತ್ತರಿಸುವ 13ನೇ ಪಟ್ಟಿಯಲ್ಲಿರುವ 40 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 621, 622, 596, 571, 423, 425, 427, 564, 440 ಮತ್ತು 441 ಪ್ರಶ್ನೆಗಳನ್ನು ಹೊರತು ಪಡಿಸಿ ಉಳಿದ 30 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದಲ್ಲಿ ಕೆಲಸ ಕಳೆದಕೊಂಡಿರುವ ಪಟೇಲರುಗಳಿಗೆ ಅಡ್ಹಾಕ್ ವಿಶ್ರಾಂತಿ ವೇತನ

642 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆನುವಂಶೀಕ ಹಕ್ಕು ರದ್ದಿಯಾತಿ ಕಾಯ್ದೆ ಮೇರೆಗೆ ಹಕ್ಕು ಕಳೆದುಕೊಂಡ ಗ್ರಾಮಾಧಿಕಾರಿಗಳ ಪೈಕಿ ಶ್ಯಾನುಭೋಗರುಗಳಿಗೆ ಸರ್ಕಾರ ಕೋರ್ಟು ಆದೇಶದಂತೆ 500.00 ರೂ. ಅಡ್ಹಾಕ್ ವಿಶ್ರಾಂತಿ ವೇತನ ಪಾವತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಆ ರೀತಿ ರಾಜ್ಯದಾದ್ಯಂತ ಪಟೇಲರುಗಳಿಗೆ ತಿಂಗಳಿಗೆ ಕೇವಲ 100.00 ರೂ. ಮಾಸಿಕ ವಿಶ್ರಾಂತಿ ವೇತನ ಪಾವತಿ ಮಾಡುತ್ತಿರುವ ತಾರತಮ್ಯ ಕುರಿತು ಸದನದಲ್ಲಿ ಕಂದಾಯ ಮಂತ್ರಿಗಳು ತಾರತಮ್ಯ ನಿವಾರಣೆಗೆ ಸರ್ಕಾರದ ಕ್ರಮಗಳೇನು?*

ಇ) *ಪಟೇಲರಿಗೂ 500.00 ಮಾಸಿಕ ಅಡ್ಹಾಕ್ ವಿಶ್ರಾಂತಿ ವೇತನ ನೀಡುವ ಭರವಸೆ ನೀಡಿದ್ದು ಈವರೆವಿಗೂ ಆ ಬಗ್ಗೆ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರಲು ಕಾರಣವೇನು?*

ಈ) *ಈಗಲಾದರೂ ಸರ್ಕಾರ ಆ ಬಗ್ಗೆ ತೀರ್ಮ ಕೈಗೊಳ್ಳಲಿದೆಯೆ?*